ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/20/ಎಸಿಎಂ(2)/2017-18

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:14-06-2017.

-::: ಸುತ್ತೋಲೆ :::-

ವಿಷಯ: **ಬೋಧನಾಶುಲ್ಕ ಮತ್ತು ಇತರೆ ಶುಲ್ಕವನ್ನು ಜಮೆ ಮಾಡುವ ಬಗ್ಗೆ.**

ಉಲ್ಲೇಖ: ಯೋಜನಾ ನಿರ್ವಹಣ ಘಟಕ ಖಜಾನೆ-2 ಇವರ ಅಧಿಸೂಚನೆ ಪತ್ರ ಸಂ. ಖ2/ಪಿಎಂಯು/92/2015-16, ದಿ:03-05-2017.

-0000000-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅಧಿಸೂಚನೆಯಲ್ಲಿ ಇಲಾಖೆಯ ಜಮೆಗಳನ್ನು ಖಜಾನೆ-2ರಲ್ಲಿಯೇ ನಿರ್ವಹಿಸುವ ಕುರಿತು ಮಾರ್ಗಸೂಚಿಗಳನ್ನು ನೀಡಲಾಗಿದೆ (ಅಧಿಸೂಚನೆಯ ಪ್ರತಿಯನ್ನು ತಾಂತ್ರಿಕ ಶಿಕ್ಷಣ ಇಲಾಖೆ ಜಾಲತಾಣದ ಸುತ್ತೋಲೆ - ಬಜೆಟ್‌ರಲ್ಲಿ ಪ್ರಕಟಿಸಲಾಗಿದೆ). ಅದರಂತೆ, ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್‌ಗಳು ಪ್ರವೇಶ ಸಮಯದಲ್ಲಿ ವಿದ್ಯಾರ್ಥಿಗಳಿಂದ ವಸೂಲಿ ಮಾಡಲಾದ ಬೋಧನಾ ಶುಲ್ಕ, ಅಭಿವೃದ್ಧಿ ಶುಲ್ಕ, ಪ್ರವೇಶ ಶುಲ್ಕ, ಮರು ಪ್ರವೇಶ ಶುಲ್ಕ, ಹಾಗೂ ವರ್ಗಾವಣೆ ಶುಲ್ಕ ಈ ಕೆಳಕಂಡ ಲೆಕ್ಕ ಶೀರ್ಷಿಕೆಗೆ ಜಮಾ ಮಾಡುವುದು.

**Head of Account : 0202-02-101-0-04-Polytechnics**

ರಾಜ್ಯದ ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ಸಂಬಂಧಿಸಿದಂತೆ ಅನುದಾನಿತ ಪಾಲಿಟೆಕ್ನಿಕ್‌ಗಳನ್ನು ಖಜಾನೆ-2ರಡಿಯಲ್ಲಿ ಅಳವಡಿಸದೆ ಇರುವ ಕಾರಣ ಪ್ರವೇಶ ಸಮಯದಲ್ಲಿ ವಿದ್ಯಾರ್ಥಿಗಳಿಂದ ವಸೂಲಿ ಮಾಡಲಾದ ಬೋಧನಾ ಶುಲ್ಕದಲ್ಲಿ ಶೇ.50ರಷ್ಟು ಬೋಧನಾ ಶುಲ್ಕ, ಅಭಿವೃದ್ಧಿ ಶುಲ್ಕ, ಪ್ರವೇಶ ಶುಲ್ಕ, ಮರು ಪ್ರವೇಶ ಶುಲ್ಕ, ಹಾಗೂ ವರ್ಗಾವಣೆ ಶುಲ್ಕ ಈ ಕೆಳಕಂಡ ಲೆಕ್ಕ ಶೀರ್ಷಿಕೆಗೆ ಖಜಾನೆ-1 ರಡಿಯಲ್ಲಿ ಈ ಹಿಂದಿನ ಸಾಲುಗಳಲ್ಲಿ ಜಮೆ ಮಾಡಿದಂತೆಯೇ ಕ್ರಮ ಜರುಗಿಸುವುದು.

**Head of Account : 0202-02-101-0-06-Aided Polytechnics**

ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ವಸೂಲಿ ಮಾಡಲಾಗುವ ಮೇಲ್ಕಂಡ ಶುಲ್ಕಗಳನ್ನು ಶುಲ್ಕ ವಸೂಲಿ ಮಾಡಿದ ದಿನಾಂಕದ ಮರು ದಿನವೇ ಮೇಲ್ಕಂಡ ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡಲು ಈ ಮೂಲಕ ತಿಳಿಸಲಾಗಿದೆ.

2017-18ನೇ ಸಾಲಿನಲ್ಲಿ ವಿದ್ಯಾರ್ಥಿಗಳ ಪ್ರವೇಶ ಸಂಬಂಧ ವಿದ್ಯಾರ್ಥಿಗಳಿಂದ ವಸೂಲಿ ಮಾಡಿದ ಮೊತ್ತಗಳನ್ನು ಪ್ರತ್ಯೇಕವಾಗಿ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳವಾರು ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಅದಕ್ಕೆ ಅನುಗುಣವಾಗಿ ಖಜಾನೆಗೆ ಜಮೆ ಮಾಡಿದ ವಿವರಗಳನ್ನು ಈ ಕಛೇರಿಗೆ ಸಲ್ಲಿಸುವುದು.

ನಿರ್ದೇಶಕರು

ಇವರಿಗೆ,

*ರಾಜ್ಯದ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ - ಸೂಕ್ತ ಮಾಹಿತಿಗಾಗಿ ಹಾಗೂ ಅನುಸರಣೆಗಾಗಿ.*

ಪ್ರತಿ:-

1. ಜಂಟಿ ನಿರ್ದೇಶಕರು(ಆಡಳಿತ), ತಾಂ.ಶಿ.ನಿ, ಬೆಂಗಳೂರು
2. ಜಂಟಿ ನಿರ್ದೇಶಕರು(ಪರೀಕ್ಷೆ), ತಾಂ.ಶಿ.ನಿ, ಬೆಂಗಳೂರು
3. ಜಂಟಿ ನಿರ್ದೇಶಕರು(ಎಟಿಎಸ್), ತಾಂ.ಶಿ.ನಿ, ಬೆಂಗಳೂರು
4. ಆಡಳಿತಾಧಿಕಾರಿಗಳು, ತಾಂ.ಶಿ.ನಿ, ಬೆಂಗಳೂರು.
5. ಲೆಕ್ಕಾಧಿಕಾರಿಗಳು, ತಾಂ.ಶಿ.ನಿ, ಬೆಂಗಳೂರು.
6. ನಿರ್ದೇಶಕರ ಆಪ್ತ ಶಾಖೆಗೆ.
7. ಬಿಲ್ಸ್ ವಿಭಾಕ್ಕೆ.
8. ಕಡತಕ್ಕೆ.